


### ಸಂಗ್ರಹಯೋಗ್ಯ ಸಂಚಿಕೆ

'ನಿಮ್ಮ ಆರೋಗ್ಯದ ಗುಟ್ಟೇನು?' ಡಾ.ಸಿ.ಆರ್. ಚಂದ್ರಶೇಖರ್ ಲೇಖನ ಉಪಯುಕ್ತ ಮಾಹಿತಿ ಒಳಗೊಂಡಿತ್ತು. ಇದೊಂದು ಸಂಗ್ರಹ ಯೋಗ್ಯ ಸಂಚಿಕೆ.

–ಸು.ವಿಜಯಲಕ್ಷ್ಮಿ, ಶಿವಮೊಗ್ಗ/
ಎಚ್.ಆನಂದಕುಮಾರ್, ಚಿತ್ರದುರ್ಗ

### 'ನವ ನವ....!'

'ಅದೇ ಶ್ರೀ ದೇವಿ' (ಬಾಲಿವುಡ್): 'ನವ ನವೋನ್ಮೇಷ ಶಾಲಿನಿ'ಯಾಗಿ ಮತ್ತೆ ಧುತ್ತೆಂದು ಪ್ರತ್ಯಕ್ಷಳಾದ 'ಶ್ರೀ'ದೇವಿ! ಈ ಸೌಂದರ್ಯ ಐಶ್ವರ್ಯಕ್ಕೇನು ಕಡಮೆ? (ಇಬ್ಬರೂ ದಕ್ಷಿಣೇಶ್ವರಿಯರೆ!) ಮಾಧುರಿ ಹೋದದ್ದೆಲ್ಲಿಗೆ, ಅಂದ ಹಾಗೆ?

–ಸಿಪಿಕೆ, ಮೈಸೂರು

### ಕೀಟ ಭಕ್ಷಕರು!

ಥಾಯ್ಲೆಂಡಿನ ಜನ ಮಸಾಲೆ ಹಾಕಿ ಕೀಟಗಳನ್ನು ತಿನ್ನುವುದನ್ನು ಚಿತ್ರ ಸಮೇತ ನೋಡಿದಾಗ (ಬರಹ: ಅರುಣ್ ಇಸ್ಲೂರ್) ವಾಂತಿ ಬರದಿದ್ದುದೇ ಆಶ್ಚರ್ಯವಾಯಿತು! ಭಕ್ಷಕರ ಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚುತ್ತದೆ ಎಂದು ತಿಳಿದು ಆ ಕೀಟಗಳ ಬಗ್ಗೆ ಅಯ್ಯೋ ಎನಿಸಿತು! ಪುಣ್ಯವಶಾತ್ ಅದಿನ್ನೂ ಭಾರತದಲ್ಲಿ ಬಾರದಿರುವುದು ಹೆಮ್ಮೆಯ ಸಂಗತಿಯೆಂದೇ ಹೇಳಬಹುದು!

–ಪಿ.ಎನ್. ಶ್ರೀವತ್ಸ, ಬೆಂಗಳೂರು

### ನಮ್ಮಲ್ಲೂ ಇದ್ದಾರೆ!

ನಮ್ಮ ಮಲೆನಾಡಿನಲ್ಲಿ (ಶಿವಮೊಗ್ಗ ಜಿಲ್ಲೆ) 'ಕೆಂಪು ಗೊದ್ದ'ಗಳನ್ನು ಗೂಡಿನ ಸಮೇತ ಹಿಡಿದು ಉಪ್ಪು ಹಾಕಿ ಚಟ್ನಿ, ಪಲ್ಯ, ಸಾರು ಮಾಡಿ ತಿನ್ನುವವರು ಇದ್ದಾರೆ! ಅಷ್ಟೇ ಅಲ್ಲ, ಮಳೆಗಾಲದಲ್ಲಿ ಹಸಿರು ಗದ್ದೆಯಲ್ಲಿ 'ಹಸಿ ತೊಳ್ಳೆ' (ಒಂದು ಜಾತಿಯ ಮಿಡತೆ) ಹಿಡಿದು ತಿಂದು ತೇಗುವವರ ಬಗ್ಗೆಯೂ ಕಂಡಿದ್ದೇನೆ!

–ಏಕನಾಥ್ ಬೊಂಗಾಳೆ, ಕಮ್ಮಚ್ಚಿ

### ಊಟ ತನ್ನಂತೆ, ಭಟ್ಟ ಪರರಂತೆ?

ನಾನು ಹುಡುಗನಾಗಿದ್ದಾಗ ಹುತ್ತದ ಹುಳುವನ್ನು (ಹೆಣ್ಣು ಗೆದ್ದಲು) ನೇರವಾಗಿ ತಿನ್ನುವ ಹಾಗೂ ಬೋನಿಗೆ ಬಿದ್ದ ಇಲಿಗಳನ್ನು ಕೇಳಿ ಪಡೆಯುವ ಜನರನ್ನು ನೋಡಿ ಆಶ್ಚರ್ಯಪಡುತ್ತಿದ್ದೆ. 'ಕೀಟ ಭಕ್ಷಣೆ' ಲೇಖನ ಓದಲು ಹಾಗೂ ಚಿತ್ರಗಳನ್ನು ನೋಡಲು 'ರುಚಿಕರ'ವಾಗಿವೆ. ಅದರಲ್ಲಿರುವ ಅಂಶಗಳು ನಿಜಕ್ಕೂ ಉಪಯುಕ್ತ!

ಆದರೆ ಕೊನೆಯಲ್ಲಿ ಲೇಖಕರು ಕೀಟ ಭಕ್ಷಣೆಗೆ ಮುಂದಾಗದೆ ಇದ್ದುದು ಮಾತ್ರ ದುಃಖ ತರಿಸಿತು!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಅರ್ಥಪೂರ್ಣ ವಿಚಾರ ಲಹರಿ

ವಿಚಾರ ಲಹರಿಯಲ್ಲಿ ಶಿಕಾಕು ಅವರು ಆಣೆ ಪ್ರಮಾಣದ ಬಗೆಗೆ ಬರೆದಿರುವ 'ನನ್ನಾಣೆ, ನಿಮ್ಮಾಣೆ, ದೇವರಾಣೆ' ಅರ್ಥಪೂರ್ಣ ಮಾಹಿತಿ ನೀಡಿದೆ.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಶಿವಮೊಗ್ಗ ಅಲ್ಲ, ದಾವಣಗೆರೆ

ನಿಮ್ಮ ಪುಟದ 'ಭಾರಿ ಹುಡೇವು' ಬರಹದಲ್ಲಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ಎಂದಾಗಿದೆ. ಹೊನ್ನಾಳಿ ದಾವಣಗೆರೆ ಜಿಲ್ಲೆಗೆ ಸೇರಿ ಎಷ್ಟೋ ಕಾಲವಾಗಿದೆ. ಆದ್ದರಿಂದ ಅದು ದಾವಣಗೆರೆ ಎಂದು ಇರಬೇಕಿತ್ತು.

–ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಹೆಸರು ಬಿಟ್ಟಿದ್ದೇಕೆ?

ಕಣಿವೆ ಬಸಪ್ಪ ದೇವಸ್ಥಾನದ ಬಗ್ಗೆ ಬರೆದಿರುವ ಎಂ.ಎಸ್.ಧರ್ಮೇಂದ್ರ ದೊಡ್ಡಮಗ್ಗೆ ಅವರು ಅಖಂಡ 49 ವರ್ಷಗಳವರೆಗೆ ಸೇವೆ ಮಾಡಿದ ಅರ್ಚಕ ಶಿವಯ್ಯ ಸ್ವಾಮಿ ಅವರ ಹೆಸರನ್ನು ಕೈಬಿಟ್ಟಿದ್ದಾರೆ. ಹುಲಿಕಲ್ ಪಕ್ಕದಲ್ಲೇ ಇರುವ ದೊಡ್ಡಮಗ್ಗೆ ಊರಿನ ಧರ್ಮೇಂದ್ರ ಅವರು ಶಿವಯ್ಯನವರ ಹೆಸರು ಬಿಟ್ಟಿರುವುದು ಪ್ರಮಾದ.

–ಉಷಾರಾಣಿ ಮಂಜುನಾಥ್, ಬೆಂಗಳೂರು

### ಯಕ್ಷಗಾನ ಮ್ಯೂಸಿಯಂ

ಲೇಖನದ ಚಿತ್ರಗಳನ್ನು ನೋಡಿದಾಗ ನೈಜ ಕಲಾವಿದರೇ ಯಕ್ಷ ದಿರಿಸಿನೊಂದಿಗೆ 'ಶೋಕೇಸ್' ನಲ್ಲಿ ಮಿಂಚುತ್ತಿದ್ದಾರೆನ್ನುವ ಅನುಭವ ಪಡೆದೆ.

–ಕೋಟೇಶ್ವರ ಸೂರ್ಯನಾರಾಯಣ ರಾವ್,
ಬೆಂಗಳೂರು

### ಮರಳಿನ ಕೋಟೆ ಸಾಧ್ಯವಿಲ್ಲ

'ಮರಳಿನ ಕೋಟೆ' ಬಗ್ಗೆ 'ವಂಡರ್ ಪುಟ'ದಲ್ಲಿ ವಿದ್ಯಾ ಹಾಲಭಾವಿ ಬರೆದಿದ್ದಾರೆ. ಆದರೆ ಮರಳಿನಲ್ಲಿ 37 ಚಿಲ್ಲರೆ ಅಡಿಯ ಚೂಪಾದ ಶಿಖರದ ಕೋಟೆಯನ್ನು ನಿರ್ಮಿಸಲು ಸಾಧ್ಯವಿಲ್ಲ. ಎಲ್ಲಿ ನಿರ್ಮಿಸಿರುವುದು ಎಂಬುದರ ವಿವರ ಸಹ ಇಲ್ಲ.

–ಎಂ. ಮಲ್ಲಯ್ಯ, ಶ್ರೀರಾಂಪುರ/
ಸೀತಾಕೇಶವ, ಸಿಡ್ನಿ(ಆಸ್ಟ್ರೇಲಿಯಾ)

### ತೆರೆಯ ಹಿಂದೆ ಹೃದಯಸ್ಪರ್ಶಿ

'ತೆರೆಯ ಹಿಂದಿನ ಸತ್ಯ!' ಅಬ್ದುಲ್ ಹಮೀದ್ ಪಡುಬಿದ್ರಿ ಲೇಖನ ಹೃದಯಸ್ಪರ್ಶಿಯಾಗಿತ್ತು. ಒಂದೇ ಒಂದು ಸಣ್ಣ ಆಕಸ್ಮಿಕ ದುರಂತವೂ ಸಾಹಸ ನಟನನ್ನು ಕಾಡುತ್ತದೆ ಎಂಬುದಕ್ಕೆ ವಿದ್ಯಾನಾಥ ಶೆಟ್ಟಿ ಉದಾಹರಣೆಯಾಗಿದ್ದಾರೆ.

–ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### 'ಕಾಕಿ ಗಿಡ' ಸೊಗಸಾದ ಕಾದಂಬರಿ



ವಸುಮತಿ ಉಡುಪರ 'ಕಾಕಿ ಗಿಡ' ಧಾರಾವಾಹಿ ಚೆನ್ನಾಗಿ ಬರುತ್ತಿದೆ. ಅಕ್ಕ ತಂಗಿ, ಅತ್ತೆ ಸೊಸೆ, ಗಂಡನ ಮನೆ, ತವರು ಮನೆ ಸಂಬಂಧಗಳ ಸೂಕ್ಷ್ಮಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಮಹಿಳೆಯರು ಅವಶ್ಯವಾಗಿ ಓದುವ ಕಾದಂಬರಿಯಾಗಿದೆ. ಟಿವಿಯಲ್ಲಿ ಇದು ಧಾರಾವಾಹಿಯಾಗಿ ಮೂಡಿ ಬರಲಿ.

–ವಿಜಯಾ ಬಸವರಾಜ್, ಬೆಂಗಳೂರು/ ಮೊಳಕಾಲ್ಮುರು ಸುರೇಶ್,
ಬಳ್ಳಾರಿ/ ಬಿ.ಎಸ್.ಮುಳ್ಳೂರ, ಹಲಗತ್ತಿ



ಕಸ್ಟಮರ್‌ಕೇರ್-ಕಮ್ಮನಹಳ್ಳಿ: 9663546007
ಕೋರಮಂಗಲ: 9591779772